॥ ಶ್ರೀಮದ್ಯೋಗಾನಂದ ಗುರುನರಸಿಂಹ ಪ್ರಸನ್ನ ॥

# ದಕ್ಷಿಣ ಕನ್ನಡ ಕೂಟಬ್ರಾಹ್ಮಣರ ಮಿತ್ರಮಂಡಳಿ (ರಿ.) ಬೆಂಗಳೂರು

(ನೋಂದಣಿ ಸಂಖ್ಯೆ 175 / 63-64)

12, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು-560 004

## 2022-23ನೇ ಸಾಲಿನ 54ನೇ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ

ಸದಸ್ಯ ಮಹನೀಯರೇ,

ದಕ್ಷಿಣ ಕನ್ನಡ ಕೂಟಬ್ರಾಹ್ಮಣರ ಮಿತ್ರ ಮಂಡಳಿ (ರಿ.), ಬೆಂಗಳೂರು ಇದರ 2022-23ನೇ ಸಾಲಿಗೆ ಸಂಬಂಧಿಸಿದ ಐವತ್ತನಾಲ್ಕನೇ ಸರ್ವಸದಸ್ಯರ ಸಭೆಯನ್ನು ದಿನಾಂಕ **30-9-2023** ರಂದು ಶನಿವಾರ ಬೆಳಿಗ್ಗೆ 10:00 ಘಂಟೆಗೆ ಸಂಸ್ಥೆಯ ಅಧ್ಯಕ್ಷರಾದ ಡಾ॥ ಪಿ. ವಿಷ್ಣುಮೂರ್ತಿ ಐತಾಳರ ಅಧ್ಯಕ್ಷತೆಯಲ್ಲಿ ಶ್ರೀ ಗುರುನರಸಿಂಹ ಕಲ್ಯಾಣ ಮಂದಿರ, ನಂ. 12, ಬುಲ್ ಟೆಂಪಲ್ ರಸ್ತೆ, ಬೆಂಗಳೂರು-560 004, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ತಾವು ಆಗಮಿಸಿ ಸಭಾ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಬೆಂಗಳೂರು-560 004
ದಿನಾಂಕ : 27-8-2023

ದಕ್ಷಿಣ ಕನ್ನಡ ಕೂಟ ಬ್ರಾಹ್ಮಣರ ಮಿತ್ರ ಮಂಡಳಿಯ
ಆಡಳಿತ ಮಂಡಳಿ ಪರವಾಗಿ
ಸಹಿ/-
ಡಾ॥ ಕಾರ್ತಟ್ಟು ಸುರೇಶ್ ಐತಾಳ
ಗೌ॥ ಕಾರ್ಯದರ್ಶಿ

### ಕಾರ್ಯ ಸೂಚಿ :

1. ಪ್ರಾರ್ಥನೆ
2. ಸ್ವಾಗತ
3. ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
4. ಸಂತಾಪ ಸೂಚನೆ
5. 53ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿ ಸ್ಥಿರೀಕರಣ.
6. ದಿನಾಂಕ 24-6-2023 ರಂದು ನಡೆದ ವಿಶೇಷ ಸರ್ವಸದಸ್ಯರ ಸಭೆಯ ನಡಾವಳಿ ಸ್ಥಿರೀಕರಣ.
7. 2022-2023ನೇ ಸಾಲಿನ ಆಡಳಿತ ವರದಿಯ ಅನುಮೋದನೆ.
8. 2022-2023ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಅನುಮೋದನೆ.
9. 2023-2024ನೇ ಸಾಲಿಗೆ ಆಯ-ವ್ಯಯ ಮುಂಗಡ ಪತ್ರದ ಅನುಮೋದನೆ ಹಾಗೂ 2022-23ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಆದ ಖರ್ಚಿಗೆ ಘಟನೋತ್ತರ ಅನುಮೋದನೆ.
10. ಮುಂದಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ ಮತ್ತು ಸಂಭಾವನೆ ನಿಷ್ಕರ್ಶೆ.
11. ಸಭೆಗೆ 7 ದಿನ ಮುಂಚಿತವಾಗಿ (ಬೈಲಾ ನಿಯಮ 7ರ ಅನುಸಾರ) ಬಂದ ಪತ್ರಗಳು.
12. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.
13. ಅಧ್ಯಕ್ಷರ ಭಾಷಣ.
14. ಧನ್ಯವಾದ ಸಮರ್ಪಣೆ.

ಸಭೆಯ ನಂತರ ಭೋಜನ

## ಸದಸ್ಯರ ಗಮನಕ್ಕೆ :

★ ಸದಸ್ಯ ಮಹನೀಯರು ಸಭೆಯಲ್ಲಿ ಭಾಗವಹಿಸುವಾಗ ಸದಸ್ಯತ್ವ ಕಾರ್ಡ್ ತಮ್ಮೊಂದಿಗೆ ತರಬೇಕಾಗಿ ವಿನಂತಿ. ಸದಸ ಕಾರ್ಡ್ ಹಾಜರುಪಡಿಸಿದವರಿಗೆ ಮಾತ್ರ ಪ್ರವೇಶ. ಸದಸ್ಯತ್ವ ಕಾರ್ಡ್ ಕಳೆದಿದ್ದರೆ, ಸಂಘದ ಕಾರ್ಯಾಲಯದಲ್ಲಿ ತ ಒಂದು ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸಿ, ಸದಸ್ಯತ್ವ ಕಾರ್ಡ್ ಪಡೆಯಬಹುದು. ಸದಸ್ಯತ್ವ ಕಾರ್ಡ್ ಪಡೆಯದ ಸದಸ್ಯ ಸಂಸ್ಥೆಯ ಕಾರ್ಯಾಲಯದಲ್ಲಿ ಸದಸ್ಯತ್ವ ಕಾರ್ಡ್ ಪಡೆಯಬಹುದು.

ಕಾರ್ಯಾಲಯ ಸಮಯ: ಬೆಳಿಗ್ಗೆ 8:00 ರಿಂದ 12:00 ಮತ್ತು ಸಂಜೆ 4:00 ರಿಂದ 8:00 ಘಂಟೆಯವರೆಗೆ.

★ ಸಭೆಯಲ್ಲಿ ಯಾವುದಾದರು ವಿಷಯ ಚರ್ಚಿಸಬಯಸುವವರು ಸಂಘದ ಉಪನಿಯಮ 7ರ ಮೇರೆಗೆ ಸಭೆಗೆ 7 ಮುಂಚಿತವಾಗಿ ವಿಷಯವನ್ನು ಲಿಖಿತ ಮೂಲಕ ಸಂಘದ ಕಚೇರಿಗೆ ತಲುಪಿಸಬೇಕು. ನಂತರ ಬಂದ ವಿಷಯಗಳನ್ನು ಸಭೆಯ ಚರ್ಚಿಸಲು ಅವಕಾಶವಿರುವುದಿಲ್ಲ.

★ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರಗಳ ಮುದ್ರಿತ ಪುಸ್ತಕವನ್ನು ಸದಸ್ಯರು ಖುದ್ದಾಗಿ ತಾ|| 20-9-2023 ರಿ ಸಂಘದ ಕಾರ್ಯಾಲಯದಲ್ಲಿ ಪಡೆಯಬಹುದು.

★ ಸದಸ್ಯರ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು ಬದಲಾಗಿದ್ದಲ್ಲಿ ದಯಮಾಡಿ ಕಾರ್ಯಾಲಯದಲ್ಲಿ ತಿ ಸರಿಪಡಿಸಿಕೊಳ್ಳಬೇಕಾಗಿ ವಿನಂತಿ.